ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಃ ಕೃವಾವಿ/ತಾಂ-2/48/ಕೃಪಂಪ್ರ/2011 ಕೃಷಿ ಆಯುಕ್ತರ ಕಾರ್ಯಾಲಯ

ಲಗತ್ತುಃ 25 ಪ್ರಕಟಣೆ ಪ್ರತಿಗಳು ಶೇಷಾದ್ರಿ ರಸ್ತೆ, ಬೆಂಗಳೂರು -01

ದಿನಾಂಕಃ 25-03-2011

ಇವರಿಗೆ

ನಿರ್ದೇಶಕರು

ವಾರ್ತಾ ಇಲಾಖೆ, ಇನ್‌ಫೆಂಟ್ರಿ ರಸ್ತೆ

ಬೆಂಗಳೂರು-೦೧

ಮಾನ್ಯರೆ,

ವಿಷಯಃ 2010-11ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸುವ ಕುರಿತು-

ಉಲ್ಲೇಖಃ ಸರ್ಕಾರದ ಆದೇಶ ಸಂಃ ಕೃತೋಇ.85.ಕೃಯೋಕಾ.2005 ಬೆಂಗಳೂರು ದಿನಾಂಕಃ 1-9-2005 ಮತ್ತು ಕೃತೋಇ.72.ಕೃಯೋಕಾ.2007 ಬೆಂಗಳೂರು ದಿನಾಂಕಃ 28-04-2007.

---

ಕೃಷಿ ವಲಯದ ನಾಲ್ಕು ಪ್ರಮುಖ ವಿಭಾಗಗಳಲ್ಲಿ ತಮ್ಮದೇ ಆದ ಅಮೂಲ್ಯ ಅನ್ವೇಷಣೆ /ವಿಶಿಷ್ಠ ಸಾಧನೆ ಮೂಲಕ ರೈತ ಸಮುದಾಯಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತಿರುವ ರಾಜ್ಯದ ಪರಿಣಿತ ಕೃಷಿಕ ಮಹನೀಯರುಗಳನ್ನು ಗುರುತಿಸುವ 2010-11ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ರಾಜ್ಯದ ಆಸಕ್ತ ಮಹನೀಯರುಗಳಿಂದ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.

ಈ ಕುರಿತು ಪ್ರಕಟಣೆಯ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದ್ದು, ದಯವಿಟ್ಟು ಸದರಿ ಪ್ರಕಟಣೆಯನ್ನು ಉಚಿತವಾಗಿ ರಾಜ್ಯದ ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಕೋರಿದೆ.

ತಮ್ಮ ವಿಶ್ವಾಸಿ,

ಕೃಷಿ ನಿರ್ದೇಶಕರು

ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ ರವಾನಿಸುತ್ತಾ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಲಾಗಿದೆ.

ಪ್ರತಿಯನ್ನು ಅಭಿನಂದನಾಪೂರ್ವಕವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-೦೧ ಇವರಿಗೆ ಸಲ್ಲಿಸಲಾಗಿದೆ.

ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಃ ಕೃವಾವಿ/ತಾಂ-2/48/ಕೃಪಂಪ್ರ/2011

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು -01
ದಿನಾಂಕಃ 25-03-2011

ಪ್ರ ಕ ಟ ಣೆ

ವಿಷಯಃ 2010-11ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಆಹ್ವಾನಿಸುವ ಕುರಿತು-

ಉಲ್ಲೇಖಃ ಸರ್ಕಾರ ಆದೇಶ ಸಂ ಕೃತೋಇ.85. ಕೃಯೋಕಾ.2005 ಬೆಂಗಳೂರು ದಿಃ 1-9-2005 ಮತ್ತು
ಕೃತೋಇ/72/ಕೃಯೋಕಾ/2007 ಬೆಂಗಳೂರುದ ದಿಃ 28-04-2007.

---

ಕೃಷಿ ವಲಯದ ಈ ಕೆಳಕಂಡ ನಾಲ್ಕು ಪ್ರಮುಖ ವಿಭಾಗಗಳಲ್ಲಿ ತಮ್ಮದೇ ಆದ ಅಮೂಲ್ಯ ಅನ್ವೇಷಣೆ/ವಿಶಿಷ್ಟ ಸಾಧನೆ ಮೂಲಕ ರೈತ ಸಮುದಾಯಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತಿರುವ ರಾಜ್ಯದ ಪರಿಣಿತ ಕೃಷಿಕ ಮಹನೀಯರುಗಳನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ 2010-11ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ರಾಜ್ಯದ ಆಸಕ್ತ ಮಹನೀಯರುಗಳಿಂದ ನಾಮ ನಿರ್ದೇಶನಗಳನ್ನು ಈ ಕೆಳಗೆ ಕಾಣಿಸಿದ ನಾಲ್ಕು ವಿಭಾಗಗಳಲ್ಲಿ ಆಹ್ವಾನಿಸಲಾಗಿದೆ. ಪ್ರತಿ ವಿಭಾಗದಲ್ಲಿ ತಲಾ ರೂ.1.00 ಲಕ್ಷಗಳ ಪ್ರಥಮ, ರೂ.0.50 ಲಕ್ಷಗಳ ದ್ವಿತೀಯ ಮತ್ತು ರೂ.0.25 ಲಕ್ಷಗಳ ತೃತೀಯ ಬಹುಮಾನಗಳನ್ನು ಪ್ರಶಸ್ತಿ ಪತ್ರದೊಂದಿಗೆ ನೀಡಲಾಗುವುದು.

**ವಿಭಾಗಗಳು :**

1 ಸಮಗ್ರ ಕೃಷಿ ಪದ್ಧತಿ, ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯೀಕರಣ
2. ಸಾವಯವ ಕೃಷಿ,
3. ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ ಮತ್ತು
4. ನೀರಿನ ಸಮರ್ಥ ಬಳಕೆ,

ಸೂಚಿತ ನಾಲ್ಕು ವಿಭಾಗಗಳಡಿಯಲ್ಲಿ ಸದರಿ ಪ್ರಶಸ್ತಿಗೆ ನಾಮ ನಿರ್ದೇಶನ ಸಲ್ಲಿಸ ಬಯಸುವ ಮಹನೀಯರುಗಳು, ತಮ್ಮ ನಾಮ ನಿರ್ದೇಶನಗಳನ್ನು ನಿಗದಿತ ನಮೂನೆಯಲ್ಲಿ ಸಂಬಂಧಿತ ದಾಖಲಾತಿಗಳೊಂದಿಗೆ **ಕಡ್ಡಾಯವಾಗಿ** ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ಕೃಷಿ ವಿಶ್ವವಿದ್ಯಾನಿಲಯಗಳ ತಜ್ಞರ ಷರಾ/ಶಿಫಾರಸ್ಸಿನೊಂದಿಗೆ ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು - 560 001 ಇವರಿಗೆ ದಿನಾಂಕಃ 31-05-2011 ರೊಳಗಾಗಿ ತಲುಪುವಂತೆ ಕಳುಹಿಸಲು ಕೋರಿದೆ. ತಡವಾಗಿ ಬರುವ ಪ್ರವೇಶ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ಕಾರ್ಯಕ್ರಮದಲ್ಲಿ ಭಾಗವಹಿಸಲು ಬಯಸುವ ಮಹನೀಯರುಗಳು ಅರ್ಜಿ ನಮೂನೆಗಳಿಗಾಗಿ ತಮ್ಮ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಛೇರಿ, ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಹೋಬಳಿಯ ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಲು ಕೋರಿದೆ. ಅಲ್ಲದೆ ವೆಬ್‌ಸೈಟ್ http://raitamitra.kar.nic.in ನಿಂದಲೂ ಸಹ ಅರ್ಜಿ ನಮೂನೆ ಮತ್ತು ವಿವರಗಳನ್ನು ಪಡೆಯಬಹುದು. .

ಕೃಷಿ ನಿರ್ದೇಶಕರು

# 2010-11 ನೇ ಸಾಲಿನ
## ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನ

2010-11ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗಾಗಿ ಕೃಷಿ ವಲಯದಲ್ಲಿ ಗಮನಾರ್ಹ/ಭಿನ್ನವಾದ ಸಾಧನೆಗೈದ, ಮಣ್ಣು, ನೀರು ಮತ್ತು ನೈಸರ್ಗಿಕ ಸಂಪನ್ಮೂಲ ಸದ್ಬಳಕೆಯಿಂದ ಸಾಗುವಳಿಯಲ್ಲಿ ಅಧಿಕ ಗುಣಮಟ್ಟದ ಉತ್ಪಾದನೆ ಬರುವಂತೆ ಬದಲಾವಣೆ ತಂದಿರುವ, ರೈತರ ಆರ್ಥಿಕ ಮಟ್ಟ ಸುಧಾರಣೆಗೆ ಅನುವಾಗುವಂತೆ ಸೃಜನಾತ್ಮಕ ಕಾರ್ಯದಿಂದ ರೈತ ಸಮುದಾಯದ ಶ್ರೇಯೋಭಿವೃದ್ದಿಗೆ ಹಾಗು ಮಾರ್ಗದರ್ಶಕರಾಗಿ ಶ್ರಮಿಸುತ್ತಿರುವ ವ್ಯಕ್ತಿಗಳಿಂದ ನಾಮ ನಿರ್ದೇಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕೇಂದ್ರ/ರಾಜ್ಯ ಸರ್ಕಾರ ಅಥವಾ ಅಂಗ ಸಂಸ್ಥೆಗಳಿಂದ ಈ ಸಾಧನೆಗೆ ಈಗಾಗಲೇ ಪುರಸ್ಕೃತರಾದವರು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮತ್ತು ಸರ್ಕಾರದ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ/ನಿವೃತ್ತರಾದವರು ಈ ಪ್ರಶಸ್ತಿಗೆ ಅರ್ಹರಲ್ಲ. ಪ್ರಶಸ್ತಿಯ ವಿವರ ಮತ್ತು ಅರ್ಜಿ ನಮೂನೆಗಳನ್ನು ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು/ರೈತ ಸಂಪರ್ಕ ಕೇಂದ್ರಗಳಿಂದ ಪಡೆಯಬಹುದು.

ನಾಮ ನಿರ್ದೇಶನ ಪತ್ರಗಳನ್ನು **ಕಡ್ಡಾಯವಾಗಿ** ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ಕೃಷಿ ವಿಶ್ವವಿದ್ಯಾನಿಲಯಗಳ ತಜ್ಞರ ಶಿಫಾರಸ್ಸಿನೊಂದಿಗೆ ಜಂಟಿ ಕೃಷಿ ನಿರ್ದೇಶಕರು (ವಿಸ್ತರಣೆ ಮತ್ತು ತರಬೇತಿ) ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು - 560 001 ಇವರಿಗೆ ದಿನಾಂಕ-**31-05-2011** ರೊಳಗೆ ತಲುಪುವಂತೆ ಕಳುಹಿಸಲು ಕೋರಿದೆ.

**ಸೂಚನೆಃ ತಡವಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

**ಅರ್ಜಿ ನಮೂನೆಯನ್ನು ಇಲಾಖೆ ವೆಬ್ ಸೈಟ್ ಃ http://raitamitra.kar.nic.in/KPP.pdf ನಿಂದಲೂ ಸಹ ಪಡೆಯಬಹುದು.**

ಕರ್ನಾಟಕ ಸರ್ಕಾರ

(ಕೃಷಿ ಇಲಾಖೆ)

ಸಂಃ ಕೃವಾವಿ/ತಾಂ-2/48/ಕೃಪಂಪ್ರ/2011

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು -01
ದಿನಾಂಕಃ 25-03-2011

## ಸುತ್ತೋಲೆ

ವಿಷಯಃ 2010-11ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಆಹ್ವಾನಿಸುವ ಬಗ್ಗೆ-

ಉಲ್ಲೇಖಃ 1 .ಸರ್ಕಾರದ ಆದೇಶ ಸಂಃ ಕೃತೋಇ.323.ಕೃಯೋಕಾ.೨೦೦೦ ಬೆಂಗಳೂರು, ದಿನಾಂಕಃ 31-01-2002.

2. ಸರ್ಕಾರದ ಆದೇಶ ಸಂಃ ಕೃತೋಇ. 213. ಕೃಯೋಕಾ. 2002 ಬೆಂಗಳೂರು ದಿಃ 24-2-2003.
3. ಸರ್ಕಾರಿ ಪತ್ರ ಸಂ ಎಹೆಚ್ ಡಿ.267.ಎಎಂಎಲ್.2004 ಬೆಂಗಳೂರು ದಿ: 18-12-2004.
4. ಸರ್ಕಾರ ಆದೇಶ ಸಂ ಕೃತೋಇ. 85 ಕೃಯೋಕಾ.2005 ಬೆಂಗಳೂರು ದಿಃ 1-9-2005.
5. ಸರ್ಕಾರಿ ಆದೇಶ ಸಂ ಕೃತೋಇ. 72. ಕೃಯೋಕಾ.2007 ಬೆಂಗಳೂರು ದಿಃ 28-04-2007.

---

ಕೃಷಿ ವಲಯದ ನಾಲ್ಕು ಪ್ರಮುಖ ವಿಭಾಗಗಳಲ್ಲಿ ತಮ್ಮದೇ ಆದ ಅಮೂಲ್ಯ ಅನ್ವೇಷಣೆ/ವಿಶಿಷ್ಟ ಸಾಧನೆ ಮೂಲಕ ರೈತ ಸಮುದಾಯಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತಿರುವ ರಾಜ್ಯದ ಪರಿಣಿತ ಕೃಷಿಕ ಮಹನೀಯರುಗಳನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಿ ಗೌರವಿಸುವ ಕುರಿತ ಕಾರ್ಯಕ್ರಮವನ್ನು ಉಲ್ಲೇಖಿತ ಸರ್ಕಾರಿ ಆದೇಶದ ಅನುಸಾರ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು ಈ ನಿಟ್ಟಿನಲ್ಲಿ **2010-11**ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ರಾಜ್ಯದ ಆಸಕ್ತ ಮಹನೀಯರುಗಳಿಂದ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.

ಈ ಕೆಳಕಂಡ ಸೂಚಿತ ನಾಲ್ಕು ವಿಭಾಗಗಳಡಿಯಲ್ಲಿ ಸದರಿ ಪ್ರಶಸ್ತಿಗೆ ನಾಮ ನಿರ್ದೇಶನ ಸಲ್ಲಿಸ ಬಯಸುವ ಮಹನೀಯರುಗಳು, ತಮ್ಮ ನಾಮ ನಿರ್ದೇಶನಗಳನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಸಾಧನೆಗಳ ಪೂರ್ಣ ವಿವರಗಳು ಹಾಗೂ ಸಂಬಂಧಿತ ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ಕೃಷಿ ವಿಶ್ವವಿದ್ಯಾನಿಲಯಗಳ ತಜ್ಞರ ಷರಾ/ ಶಿಫಾರಸ್ಸಿನೊಂದಿಗೆ ಜಂಟಿ ಕೃಷಿ ನಿರ್ದೇಶಕರು(ವಿಸ್ತರಣೆ ಮತ್ತು ತರಬೇತಿ) ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560 001 ಇವರಿಗೆ ದಿನಾಂಕಃ 31-05-2011 ರೊಳಗಾಗಿ ಕಳುಹಿಸಬೇಕು. ತಡವಾಗಿ ಬರುವ ಪ್ರವೇಶ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಈ ಕಾರ್ಯಕ್ರಮದ ಬಗ್ಗೆ ಸ್ಥಳೀಯವಾಗಿ ವ್ಯಾಪಕ ಪ್ರಚಾರ ಕಾರ್ಯವನ್ನು ತಮ್ಮ ಹಂತದಲ್ಲಿ ಕೈಗೊಳ್ಳಲು ಸೂಚಿಸಿದೆ. ಈಗಾಗಲೇ ಈ ಪ್ರಶಸ್ತಿಯನ್ನು ಪಡೆಯದೇ ಇರುವಂತಹ ಅರ್ಹ ಮಹನೀಯರುಗಳು ನಿಮ್ಮ ವ್ಯಾಪ್ತಿಯಲ್ಲಿ ಇದ್ದಲ್ಲಿ ಅವರಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಪಡೆದು ತಿಳಿಸಲಾಗಿರುವಂತೆ ಶಿಫಾರಸ್ಸಿನೊಂದಿಗೆ ಸಕಾಲದಲ್ಲಿ ಕಳುಹಿಸಿಕೊಡುವ ಬಗ್ಗೆ ಕ್ರಮ ವಹಿಸತಕ್ಕದ್ದು.

## ಕೃಷಿ ಪಂಡಿತ ಪ್ರಶಸ್ತಿ ಬಹುಮಾನದ ವಿವರ (ರೂ.ಗಳಲ್ಲಿ)

| ಕ್ರ.ಸಂ | ವಿಭಾಗ | ಪ್ರಥಮ ಸ್ಥಾನ | ದ್ವಿತೀಯ ಸ್ಥಾನ | ತೃತೀಯ ಸ್ಥಾನ |
|---|---|---|---|---|
| 1 | ಸಮಗ್ರ ಕೃಷಿ ಪದ್ಧತಿ, ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯೀಕರಣ | 1,00,000 | 50,000 | 25,000 |
| 2 | ಸಾವಯವ ಕೃಷಿ | 1,00,000 | 50,000 | 25,000 |
| 3 | ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ | 1,00,000 | 50,000 | 25,000 |
| 4 | ನೀರಿನ ಸಮರ್ಥ ಬಳಕೆ | 1,00,000 | 50,000 | 25,000 |

## ಕೃಷಿ ಪಂಡಿತ ಪ್ರಶಸ್ತಿ ಪರಿಗಣನೆಗೆ ಪ್ರಮುಖ ಅಂಶಗಳುಃ

1. ಉದ್ದೇಶಿತ ಕೃಷಿ ಪಂಡಿತ ಪ್ರಶಸ್ತಿಗಾಗಿ ಭಾಗವಹಿಸಲಿಚ್ಛಿಸುವವರು ರಾಜ್ಯದ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ/ ವಿಶಿಷ್ಟ ಸಾಧನೆಯನ್ನು ಮಾಡಿರಬೇಕು. ಅವರ ಸಂಶೋಧನೆಗಳು/ಸಾಧನೆಗಳು ವ್ಯಾಪಕವಾಗಿ ಅಳವಡಿಸಲ್ಪಟ್ಟು ಕೃಷಿ ಕ್ಷೇತ್ರದ ಏಳಿಗೆಗೆ ಪೂರಕವಾಗಿರಬೇಕು. ಅಭ್ಯರ್ಥಿಗಳು ಮಾಡಿರುವ ಸಾಧನೆಯು ಮೂಲ ಸ್ವರೂಪದಾಗಿದ್ದು ಬೇರೆಯವರು ಮಾಡಿರುವ ಸಾಧನೆಗಿಂತ ಭಿನ್ನವಾಗಿರಬೇಕು.
2. ಕೃಷಿ ಸಾಗುವಳಿಯಲ್ಲಿ ಅಮೋಘ ಬದಲಾವಣೆ ಮಾಡಿದಂತಹ ಸಾಧಕರು.
3. ಮುಖ್ಯವಾಗಿ ಇವರ ಸಂಶೋಧನೆಯಲ್ಲಿ
   - ಅ) ಕೃಷಿ ಸಾಗುವಳಿ ವೆಚ್ಚದಲ್ಲಿ ಮಿತವ್ಯಯ
   - ಆ) ಕೃಷಿ ಕಾರ್ಯಗಳ ಸಮರ್ಥ ಸಕಾಲಿಕ ಅನುಷ್ಠಾನ
   - ಇ) ಉತ್ಪಾದಕತೆಯಲ್ಲಿ ಹೆಚ್ಚಳ
   - ಈ) ಕೃಷಿ ಉತ್ಪನಗಳ ಗುಣಮಟ್ಟದಲ್ಲಿ ಸುಧಾರಣೆ
   - ಉ) ರೈತರ ಆರ್ಥಿಕ ಏಳಿಗೆಗೆ ಪೂರಕ ಅಂಶಗಳು
4. ಈ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳಿದ್ದಲ್ಲಿ ಮಾತ್ರ ಪರಿಗಣಿಸಬಹುದಾಗಿದೆಯೇ ಹೊರತು ನೀಡಲೇಬೇಕೆಂಬ ನಿಯಮ ಕಡ್ಡಾಯವಿರುವುದಿಲ್ಲ.
5. ಕ್ಷೇತ್ರ ಭೇಟಿಗೆ ಆಯ್ಕೆ ಮಾಡುವಾಗ ಕೃಷಿ ವಿಶ್ವವಿದ್ಯಾನಿಲಯದ ತಜ್ಞರು/ಜಂಟಿ ಕೃಷಿ ನಿರ್ದೇಶಕರು ಶಿಫಾರಸ್ಸು ಮಾಡಿರುವ ಅರ್ಜಿಗಳಿಗೆ ಆಧ್ಯತೆ ನೀಡಲಾಗುವುದು.
6. ಈ ಪ್ರಶಸ್ತಿಯಲ್ಲಿ ಭಾಗವಹಿಸಲು ಕೃಷಿ ವಲಯದಲ್ಲಿ ಗಮನಾರ್ಹ ಸಾಧನೆ ಗೈದ ರಾಜ್ಯದ ಎಲ್ಲಾ ಕೃಷಿಕರಿಗೂ ಮುಕ್ತ ಅವಕಾಶವುಂಟು.
7. ಅಭ್ಯರ್ಥಿಗಳ ಒಂದೇ ಸಾಧನೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಅಥವಾ ಅಂಗ ಸಂಸ್ಥೆಗಳಿಂದ ಪ್ರಶಸ್ತಿ ಪಡೆದಂತಹ ಪ್ರಕರಣಗಳನ್ನು ಪ್ರಶಸ್ತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

**ಉದಾಃ** ಕೇಂದ್ರ ಸರ್ಕಾರದ ಭಾರತೀಯ ಕೃಷಿ ಅನುಸಂಧಾನ ಪರಿಷತ್ (ICAR), ನ್ಯಾಷನಲ್ ಇನ್ನೋವೇಷನ್ ಫೌಂಡೇಷನ್, ರಾಜ್ಯ ಸರ್ಕಾರದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಇತ್ಯಾದಿ, ನಗದು ಬಹುಮಾನ ಸಹಿತ ಪ್ರಶಸ್ತಿ ಪಡೆದವರು ಈ ಪ್ರಶಸ್ತಿಗೆ ಅರ್ಹರಲ್ಲ.

8. ಕೃಷಿ ಪಂಡಿತ ಪ್ರಶಸ್ತಿ ಪ್ರಾರಂಭವಾದಾಗಿನಿಂದ 2009-10ನೇ ಸಾಲಿನವರೆಗೆ ಒಮ್ಮೆ ಪ್ರಶಸ್ತಿ ಪಡೆದವರಿಗೆ ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ರಾಜ್ಯ/ಕೇಂದ್ರ ಸರ್ಕಾರಗಳ ವಿವಿಧ ಇಲಾಖೆ ಮತ್ತು ಅಂಗ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ / ನಿರ್ವಹಿಸುತ್ತಿರುವ ಅಭ್ಯರ್ಥಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.
9. ಪ್ರಶಸ್ತಿಗೆ ಆಯ್ಕೆ ಮಾಡುವಲ್ಲಿ ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮ

ರೈತ ಸಂಪರ್ಕ ಕೇಂದ್ರಗಳ ವತಿಯಿಂದಲೂ ಸಹ ಈ ಕಾರ್ಯಕ್ರಮದ ಬಗ್ಗೆ ಹೆಚ್ಚು ಪ್ರಚಾರ ಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸೂಕ್ತ ಆದೇಶಗಳನ್ನು ನೀಡಲು ಸೂಚಿಸಲಾಗಿದೆ.

ಕೃಷಿ ನಿರ್ದೇಶಕರು

ಪ್ರತಿಯನ್ನು ಃ

1. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ನಾಮ ನಿರ್ದೇಶನದ ಅರ್ಜಿಯಲ್ಲಿ ಕಡ್ಡಾಯವಾಗಿ ಸಾಧನೆ ಕುರಿತಂತೆ ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ನಿಗಧಿತ ದಿನಾಂಕದೊಳಗಾಗಿ ಸಲ್ಲಿಸುವುದು.
2. ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು/ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಿಗೆ (ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳ ಮೂಲಕ) ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

## ಕೃಷಿ ಪಂಡಿತ ಪ್ರಶಸ್ತಿ 2010-11

ಭಾವಚಿತ್ರ

| ವಿಭಾಗಗಳು | ಭಾಗವಹಿಸುತ್ತಿರುವ ವಿಭಾಗ<br>(ಭಾಗವಹಿಸುತ್ತಿರುವ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸುವುದು) |
|---|---|
| ಅ) ಸಮಗ್ರ ಕೃಷಿ ಪದ್ಧತಿ, ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಧೀಕರಣ | |
| ಆ) ಸಾವಯವ ಕೃಷಿ | |
| ಇ) ಕೃಷಿ ಯಂತ್ರೋಪಕರಣ ಅಭಿವೃದ್ಧಿ | |
| ಈ) ನೀರಿನ ಸಮರ್ಥ ಬಳಕೆ | |

ಮೂಲ ಮಾಹಿತಿ

| | | | |
|---|---|---|---|
| 1 | ಕೃಷಿಕರ ಹೆಸರು | | |
| 2 | ತಂದೆ/ಗಂಡನ ಹೆಸರು | | |
| 3 | ವಿಳಾಸ | ಗ್ರಾಮ | |
| | | ತಾಲ್ಲೂಕು | |
| | | ಜಿಲ್ಲೆ | |
| | | ಪಿನ್ ಕೋಡ್ | |
| | (ದೂರವಾಣಿ ಸಂಖ್ಯೆ (ಎಸ್.ಟಿ.ಡಿ.ಕೋಡ್ ಸಹಿತ) | | |
| | ಮೊಬೈಲ್ ಸಂಖ್ಯೆ | | |
| 4 | ವಯಸ್ಸು | | |
| 5 | ಶಿಕ್ಷಣ | | |
| 6 | ಕೌಟುಂಬಿಕ ಮಾಹಿತಿ<br>(ತಂದೆ/ಗಂಡ/ಮಕ್ಕಳ ವಯಸ್ಸು ಮತ್ತು ಶಿಕ್ಷಣ) | | |
| 7 | ಸಾಗುವಳಿ ಮಾಡುತ್ತಿರುವ ಜಮೀನಿನ ವಿವರ<br>**(ಪಹಣಿ ಪ್ರತಿ ಲಗತ್ತಿಸಬೇಕು)** | | ----------------------- ಎಕರೆ |
| | ಸರ್ವೆ ನಂ | ಅ) ಖುಷ್ಕಿ | ------------------------ ಎಕರೆ |
| | | ಆ) ನೀರಾವರಿ | ------------------------ ಎಕರೆ |
| | | ಇ) ಇತರೆ | ------------------------ ಎಕರೆ |
| | | ಒಟ್ಟು ಹಿಡುವಳಿ | |

| | | | | | |
|---|---|---|---|---|---|
| 8 | ಬೆಳೆಯುತ್ತಿರುವ ಬೆಳೆಗಳು ಹಾಗು ಉತ್ಪಾದಕತೆ ಮತ್ತು ಆದಾಯದ ವಿವರ | | | | |
| | ಬೆಳೆ | | ವಿಸ್ತೀರ್ಣ (ಎಕರೆ) | ಉತ್ಪಾದಕತೆ( ಕ್ವಿಂ/ಎಕರೆ) | ಆದಾಯ (ರೂ.) |
| | ಅ | | | | |
| | ಆ | | | | |
| | ಇ | | | | |
| | ಈ | | | | |

| | | | |
|---|---|---|---|
| 9 | ಹೊಂದಿರುವ ಜಾನುವಾರುಗಳ ಸಂಖ್ಯೆ | | |
| | ಅ. ಹಸು: | ಇ. ಎಮ್ಮೆ: | ಉ. ಕೋಳಿ: |
| | ಆ.ಎತ್ತು : | ಈ. ಕುರಿ: | ಊ.ಇತ್ಯಾದಿ: |

| | | | |
|---|---|---|---|
| 10 | ಹೊಂದಿರುವ ಕೃಷಿ ಉಪಕರಣಗಳು/ಸಸ್ಯ ಸಂರಕ್ಷಣೆ ಉಪಕರಣಗಳ ವಿವರ | | |
| | ೧.ಕೃಷಿ ಉಪಕರಣಗಳು | | |
| | ೨. ಸಸ್ಯ ಸಂರಕ್ಷಣಾ ಉಪಕರಣಗಳು | | |
| 11 | ಸಾವಯವ ಗೊಬ್ಬರ | ಸ್ವಂತ ಉತ್ಪಾದನೆ (ಟನ್) | ಉಪಯೋಗಿಸುವ ಪ್ರಮಾಣ (ಟನ್ ) |
| ಅ | ಸ್ಥಳೀಯ ಗೊಬ್ಬರ ಕೊಟ್ಟಿಗೆ ಗೊಬ್ಬರ (FYM) | | |
| ಆ | ಕಾಂಪೋಸ್ಟ್ | | |
| ಇ | ವರ್ಮಿ ಕಾಂಪೋಸ್ಟ್ | | |

| | | |
|---|---|---|
| 12 | ಉರವಲು ಬಳಕೆ | |
| ಆ | ಗೋಬರ್ ಅನಿಲ | |
| ಅ | ಸೋಲಾರ್/ಎಲ್.ಪಿ.ಜಿ | |
| ಇ | ಸ್ಥಳೀಯವಾಗಿ ದೊರೆಯುವ ಕಟ್ಟಿಗೆ ಇತ್ಯಾದಿ | |
| 13 | ಕ್ಷೇತ್ರ ನಿರ್ವಹಣೆ | |
| | ಅ) ಸ್ವಂತ ನಿರ್ವಹಣೆ | |
| | ಆ) ಕುಟುಂಬ ಸದಸ್ಯರಿಂದ ನಿರ್ವಹಣೆ | |

| | |
|---|---|
| 14 | **ವಿಶಿಷ್ಟ ಸಾಧನೆ/ಸಂಶೋಧನೆ ವಿವರ (ಸ್ಥಳಾವಕಾಶವಾಗದಿದ್ದಲ್ಲಿ ಪ್ರತ್ಯೇಕ ಹಾಳೆಯಲ್ಲಿ ನೀಡುವುದು)** |
| ಅ | ಕೃಷಿ ಸಾಗುವಳಿಯಲ್ಲಿ ಅಮೋಘ ಬದಲಾವಣೆ ಮಾಡಿರುವ ಬಗ್ಗೆ (ಹೆಚ್ಚು ಉತ್ಪಾದನೆ, ಕೀಟ ಬಾಧೆ ಇಲ್ಲದಂತಹ ತಳಿ ಸಂಶೋಧನೆ ಮಾಡಿದ್ದಲ್ಲಿ, ಸಾಧನೆ ) ವಿವರ ನೀಡುವುದು. |
| ಆ | ಕಡಿಮೆ ನೀರನ್ನು ಬಳಸಿಕೊಂಡು, ಕಡಿಮೆ ಅವಧಿಯಲ್ಲಿ ಉತ್ಪಾದನೆ ಮಾಡುವಂತಹ ತಳಿ ಸಂಶೋಧನೆ ಮಾಡಿದ್ದಲ್ಲಿ ಸಾಧನೆ ವಿವರ ನೀಡುವುದು |

| | | |
|---|---|---|
| ಇ | ಕಡಿಮೆ ಖರ್ಚಿನಲ್ಲಿ ಕೃಷಿ ಉಪಯೋಗಿ ವಿಶಿಷ್ಟ/ನವೀನ ಯಂತ್ರೋಪಕರಣಗಳನ್ನು ಸಂಶೋಧಿಸಿದಲ್ಲಿ ಪೂರ್ಣ ವಿವರ ಒದಗಿಸುವುದು | |
| ಈ | ಇತರೆ ವಿಶಿಷ್ಟ ಸಾಧನೆ ಮಾಡಿದ್ದಲ್ಲಿ - ಸಾಧನೆಗಳ ವಿವರಗಳನ್ನು ನೀಡುವುದು | |
| 15 | 4 ವಿಭಾಗಗಳ ಪೈಕಿ ( ಸಮಗ್ರ ಕೃಷಿ ಪದ್ಧತಿ ಮತ್ತು ಬೆಳೆ ವೈವಿಧ್ಯೀಕರಣ, ಸಾವಯವ ಕೃಷಿ, ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ ಮತ್ತು ನೀರಿನ ಸಮರ್ಥ ಬಳಕೆ ) ಒಂದರಲ್ಲಿ ಮಾಡಿರುವ ವಿಶಿಷ್ಟ ಸಾಧನೆ/ಸಂಶೋಧನೆಗಳು (ಈ ಕೆಳಕಂಡ ಅಂಶಗಳಿಗೆ ಒಳಪಟ್ಟಿದ್ದಲ್ಲಿ ಸಂಕ್ಷಿಪ್ತ ವಿವರ)<br>**ವಿಭಾಗದ ಹೆಸರು ಃ** | |
| ಅ | ಮೂಲ ಸ್ವರೂಪದ ಸಾಧನೆ<br>(ಸಂಕ್ಷಿಪ್ತ ವಿವರ ನೀಡುವುದು) | |
| ಆ | ಸಾಧನೆ ವಿಭಿನ್ನವಾಗಿದೆಯೇ?<br>ಹಾಗಿದ್ದಲ್ಲಿ ಯಾವ ರೀತಿ ವಿಭಿನ್ನವಾಗಿದೆ? | |
| ಇ | ಸಾಧನೆಯ ವಾಸ್ತವಿಕ (Practical) ಉಪಯುಕ್ತತೆ<br>(ಸಂಕ್ಷಿಪ್ತ ವಿವರ ನೀಡುವುದು) | |
| ಈ | ವ್ಯಾಪಕವಾಗಿ ಅಳವಡಿಸಲ್ಪಡುತ್ತಿದೆಯೇ?<br>(ಸಂಕ್ಷಿಪ್ತ ವಿವರ ನೀಡುವುದು) | |
| ಉ | ಸಾಗುವಳಿ ವೆಚ್ಚದಲ್ಲಿ ಮಿತವ್ಯಯ ಹಾಗೂ ಆದಾಯದಲ್ಲಿ ಹೆಚ್ಚಳ<br>(ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು) | |
| ಊ | ಸಾಧನೆಯ ಸಮರ್ಥ ಬಳಕೆ<br>(ಸಂಕ್ಷಿಪ್ತ ವಿವರ ನೀಡುವುದು) | |
| ಎ | ವಿಶಿಷ್ಟ ಸಾಧನೆಯಿಂದ ಉತ್ಪಾದಕತೆಯಲ್ಲಿ ಹೆಚ್ಚಳ<br>(ಸಂಕ್ಷಿಪ್ತ ವಿವರ ನೀಡುವುದು) | |
| ಏ | ವಿಶಿಷ್ಟ ಸಾಧನೆಯಿಂದ ಕೃಷಿ ಉತ್ಪನ್ನಗಳ ಗುಣಮಟ್ಟ ಸುಧಾರಣೆ<br>(ಸಂಕ್ಷಿಪ್ತ ವಿವರ ನೀಡುವುದು) | |

<table>
<tr><td>ಐ</td><td>ವಿಶಿಷ್ಟ ಸಾಧನೆಯು ರೈತರ ಏಳಿಗೆಗೆ ಸಹಕಾರಿಯೇ?<br>(ಸಂಕ್ಷಿಪ್ತ ವಿವರ ನೀಡುವುದು)</td><td></td></tr>
<tr><td>ಒ</td><td>ದಾಖಲಾತಿಗಳನ್ನು ಸಂಗ್ರಹಿಸಲಾಗಿದೆಯೇ?<br>(ಸಂಕ್ಷಿಪ್ತ ವಿವರ ನೀಡುವುದು)</td><td></td></tr>
<tr><td>ಓ</td><td>ಸಾಧನೆಯ ವಿವರಗಳನ್ನು ಪ್ರದರ್ಶಿಸಲಾಗಿದೆಯೇ/ ಪರಿಚಯಿಸಲಾಗಿದೆಯೇ? (ಸಂಕ್ಷಿಪ್ತ ವಿವರ ನೀಡುವುದು)</td><td></td></tr>
<tr><td>ಔ</td><td>ಇತರೆ ಮಾಹಿತಿ(ಬೇರೆ ವಿಶಿಷ್ಠ ಸಾಧನೆ ಇದ್ದಲ್ಲಿ ವಿವರ ನೀಡುವುದು)</td><td></td></tr>
<tr><td>16</td><td>ಸದರಿ ಸಾಧನೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಥವಾ ಸರ್ಕಾರಗಳ ಅಂಗ ಸಂಸ್ಥೆಗಳಿಂದ ಪ್ರಶಸ್ತಿ ಪಡೆಯಲಾಗಿದೆಯೇ?<br>ಹಾಗಿದ್ದಲ್ಲಿ ವಿವರ ನೀಡುವುದು</td><td></td></tr>
<tr><td>17</td><td>ಸಾಧನೆ ಮಾಡಿರುವ ಕ್ಷೇತ್ರದ ಮೂರು ವರ್ಷದ (2008-09, 2009-10, 2010-11) ರಲ್ಲಿ ಬೆಳೆದ/ಮಾಡಿದ ಸಾಧನೆಯ ವಿವರದ ಜೊತೆಗೆ ಆದಾಯ ಮತ್ತು ಖರ್ಚಿನ ತಃಖ್ತೆ</td><td><table><tr><td>ಕ್ರ .ಸಂ</td><td>ಬೆಳೆ</td><td>ವಿಸ್ತೀರ್ಣ (ಎ)</td><td>ಉತ್ಪಾದನೆ (ಕ್ವಿಂ)</td><td>ದರ (ರೂ)</td><td>ಒಟ್ಟು ಆದಾಯ (ರೂ)</td><td>ಒಟ್ಟು ಖರ್ಚು (ರೂ)</td><td>ನಿವ್ವಳ ಲಾಭ (ರೂ)</td></tr><tr><td></td><td></td><td></td><td></td><td></td><td></td><td></td><td></td></tr></table></td></tr>
<tr><td>18</td><td>ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಅಥವಾ ಕೃಷಿ ವಿಶ್ವವಿದ್ಯಾನಿಲಯದ ತಜ್ಞರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸು</td><td></td></tr>
</table>

(ಷರಾಃ ನಮೂನೆಯಲ್ಲಿರುವ ಜಾಗ ಕಡಿಮೆ ಇದ್ದಲ್ಲಿ ಪ್ರತ್ಯೇಕ ಪುಟಗಳಲ್ಲಿ ಅಗತ್ಯ ಪೂರ್ಣ ಮಾಹಿತಿಯನು ಒದಗಿಸುವುದು ಸಾಧನೆಯ ಬಗ್ಗೆ ಫೋಟೋಗಳು, ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ವರದಿಯ ಜೆರಾಕ್ಸ್ ಪ್ರತಿಗಳು, ಸಂಘ ಸಂಸ್ಥೆಗಳು ನೀಡಿರುವ ಪ್ರಶಂಸಾ ಪತ್ರದ ಪ್ರತಿಗಳನ್ನು ಸಹ ಒದಗಿಸುವುದು.)

**ವಿಶೇಷ ಸೂಚನೆಃ**

- **ಕಂದಾಯ ಇಲಾಖೆಯ ದಾಖಲೆ ಪ್ರಕಾರ ಜಮೀನು(ಖಾತೆ) ಹೊಂದಿರುವ ಹಾಗೂ ಸ್ವತಃ ಬೇಸಾಯದಲ್ಲಿ ತೊಡಗಿರುವ(ಮಾಡುತ್ತಿರುವ) ಸ್ವಯಂ ಕ್ರಿಯಾಶೀಲ ಕೃಷಿಕರಾಗಿದ್ದು ಪಹಣಿ ಪತ್ರಿಕೆ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು ಅಥವಾ ಸಾಮಾನ್ಯ ವ್ಯವಹಾರಿಕ ಅಧಿಕಾರ(ಜಿ ಪಿ ಎ) ಹೊಂದಿದ್ದ ಪಕ್ಷದಲ್ಲಿ (ಭೂ ಸುಧಾರಣಾ ಕಾಯ್ದೆಗೆ ಒಳಪಟ್ಟು) ಕಡ್ಡಾಯವಾಗಿ ಲಗತ್ತಿಸುವುದು.**

- **ಸಾಧನೆ ಮಾಡಿರುವ ನಿರ್ದಿಷ್ಟ ಕ್ಷೇತ್ರ/ವಿಸ್ತೀರ್ಣದ ಪ್ರದೇಶವನ್ನು ಮಾತ್ರ ನಮೂದಿಸಬೇಕು. ಹಾಗೂ ಕ್ಷೇತ್ರ ಭೇಟಿಗೆ ಅರ್ಹವೆಂದು ಪರಿಗಣಿಸಲ್ಪಟ್ಟಲ್ಲಿ ಆ ಪ್ರದೇಶವನ್ನು ಮಾತ್ರ ಪರಿಶೀಲನಾ ಕಾರ್ಯತಂಡದ ಭೇಟಿ ಸಂದರ್ಭದಲ್ಲಿ ತೋರಿಸಿ ಹೆಚ್ಚಿನ ಮಾಹಿತಿ ನೀಡತಕ್ಕದ್ದು.**
- **ಅರ್ಜಿಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು/ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ಕೃಷಿ ವಿಶ್ವವಿದ್ಯಾನಿಲಯ ತಜ್ಞರ ಸ್ಪಷ್ಟ ಅಭಿಪ್ರಾಯ/ಶಿಫಾರಸ್ಸಿನೊಂದಿಗೆ ಸಕಾಲದಲ್ಲಿ ಸಲ್ಲಿಸುವುದು ಕಡ್ಡಾಯ.**

ಈ ಅರ್ಜಿಯಲ್ಲಿ ನಾನು ನೀಡಿರುವ ಮಾಹಿತಿಯು ಸತ್ಯವಾಗಿದೆಯೆಂದು ಹಾಗೂ ಈ ಹಿಂದೆ ಕೃಷಿ ಪಂಡಿತ ಪ್ರಶಸ್ತಿಯನ್ನು ಪಡೆದಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳಃ

ದಿನಾಂಕಃ

ಅಭ್ಯರ್ಥಿಯ ಸಹಿ:

(ಅಭ್ಯರ್ಥಿಯ ಹೆಸರು)